ರಾಜರತ್ನ ಅವರು 'ದಲಿತ್ ಪ್ಯಾಂಥರ್' ಪ್ರಣಾಳಿಕೆಗೆ ತಾತ್ವಿಕ ಸ್ವರೂಪವನ್ನು ನೀಡಿದ ಬಾಬುರಾವ್ ಬಾಗುಲ್ ಅವರನ್ನು ಓದಿಕೊಂಡಿದ್ದರೆ, ದಲಿತ ಅನ್ನುವ ಐಡೆಂಟಿಟಿಯು ನೆಗೆಟಿವ್ ಆದುದು, ಅದನ್ನು ತ್ಯಜಿಸಿ ಎಂದು ಹೇಳಲು ಹೋಗುತ್ತಿರಲಿಲ್ಲವೇನೋ. ಬಾಗುಲ್ ಅವರು ದೇಶದ ಎಲ್ಲ ಕೆಳಜಾತಿಗಳನ್ನು, ಬುಡಕಟ್ಟುಗಳನ್ನು, ಮಹಿಳೆಯರನ್ನು, ಶ್ರಮಿಕರನ್ನು ಒಳಗೊಳ್ಳುವ ವ್ಯಾಪ್ತಿಯಿಂದಾಗಿ, ಕ್ರಾಂತಿಕಾರಿ ಹೋರಾಟಗಳನ್ನು ಚಾರಿತ್ರಿಕವಾಗಿ ಕಟ್ಟಿಕೊಡುವ ಕಾರಣಕ್ಕೆ, ಅದರ ವಿಮೋಚನಾ ಸಾಮರ್ಥ್ಯಕ್ಕೆ ದಲಿತ ಐಡೆಂಟಿಟಿ ಮುಖ್ಯ ಎಂದು ವಾದಿಸಿದ್ದರು.

ರಾಜರತ್ನ ಅವರು ತಮ್ಮ ವಾದವನ್ನು ಸಮರ್ಥಿಸಿಕೊಳ್ಳಲು ನ್ಯಾಯಾಲಯಗಳು 'ದಲಿತ' ಎಂಬ ಪದ ಬಳಸುವುದನ್ನು ನಿಲ್ಲಿಸಬೇಕು ಎಂದು ಸೂಚಿಸಿರುವುದನ್ನು ಉಲ್ಲೇಖಿಸಿದರು. ಅದು ನಿಜ ಕೂಡ ಹೌದು. ಅದನ್ನಾಧರಿಸಿ 2018ರಲ್ಲಿ ಕೇಂದ್ರ ಸರ್ಕಾರದ ಪ್ರಸಾರ ಸಚಿವಾಲಯವು ಮಾಧ್ಯಮಗಳಿಗೆ ಆದೇಶವನ್ನು ಕೂಡ ಹೊರಡಿಸಿತ್ತು. ಆದರೆ, ಸರ್ಕಾರದ ಆದೇಶವು ಸರ್ವೋಚ್ಚ ನ್ಯಾಯಾಲಯವೇ ಸಾಂವಿಧಾನಿಕವಾದ 'ಶೆಡ್ಯೂಲ್ಡ್ ಕ್ಯಾಸ್ಟ್' ಪದಕ್ಕೆ ಬದಲಾಗಿ 'ದಲಿತ' ಎಂದು ಬಳಸಿರುವ ಅನೇಕ ಪ್ರಸಂಗಗಳಿರುವುದನ್ನು ಗಮನಿಸದೇ ಹೋದದ್ದು ಅಚ್ಚರಿಯನ್ನುಂಟು ಮಾಡಿತ್ತು. ಅಂದಮೇಲೆ, ರಾಜರತ್ನ ಅವರಂತಹ ಅನೇಕರು ಇದನ್ನು ಗಮನಿಸದೇ ಇರುವ ಸಾಧ್ಯತೆಗಳೇ ಹೆಚ್ಚು. ರಾಜರತ್ನ ಅವರ ಹಾಗೆಯೇ ಹೆಚ್ಚಿನವರು ಗೊಂದಲಮಯ ಗ್ರಹಿಕೆ ರೂಪಿಸಿಕೊಂಡು ವಾದಿಸುವುದನ್ನು ನಾನು ಶೈಕ್ಷಣಿಕ ವಲಯದಲ್ಲೂ ಗಮನಿಸಿದ್ದೇನೆ. ಅಂತಹವರು ರಾಜಕೀಯ ತತ್ವಜ್ಞಾನಿ ಗೋಪಾಲ ಗುರು ಅವರು ತಮ್ಮ 'ದಿ ಪೊಲಿಟಿಕ್ಸ್ ಆಫ್ ನೇಮಿಂಗ್' ಲೇಖನದಲ್ಲಿ 'ದಲಿತ' ಪರಿಕಲ್ಪನೆಯ ಕುರಿತು ಸುದೀರ್ಘ ಚರ್ಚೆ ನಡೆಸಿರುವುದನ್ನು ಗಮನಿಸಿಲ್ಲವೆಂದು ಕಾಣುತ್ತದೆ. ಅವರು ಹೇಳುವ ಹಾಗೆ, ಅಂಬೇಡ್ಕರ್ ತಮ್ಮ 'ಬಹಿಷ್ಕೃತ ಭಾರತ' ಪತ್ರಿಕೆಯಲ್ಲಿ ಮೊದಲ ಬಾರಿ 'ದಲಿತ' ಎಂಬ ಪರಿಕಲ್ಪನೆಯನ್ನು ಹೀಗೆ ಬಳಸುತ್ತಾರೆ: 'ದಲಿತತ್ವ ಎಂಬುದು ಮೇಲ್ಜಾತಿ ಬ್ರಾಹ್ಮಣಶಾಹಿಯು ದಲಿತರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಹಾಗೂ ರಾಜಕೀಯ ದೌರ್ಜನ್ಯದ ಮೂಲಕ ಶೋಷಣೆ, ದಬ್ಬಾಳಿಕೆ ಹಾಗೂ ಅಂಚಿಗೆ ಸರಿಸುವ ಜೀವನ ಸ್ಥಿತಿಯಾಗಿದೆ.' ಅಂಬೇಡ್ಕರ್ ಕಾಲಕಾಲಕ್ಕೆ, ಸಂದರ್ಭಕ್ಕೆ ತಕ್ಕಂತೆ ಪದಗಳನ್ನು ಬಳಸುತ್ತಾ ಬಂದಿರುವುದನ್ನು ಗಮನಿಸಬಹುದು. ಬ್ರಿಟಿಷ್ ಆಡಳಿತದೊಂದಿಗೆ ಸಂವಹಿಸುವಾಗ 'ಡಿಪ್ರೆಸ್ಡ್ ಕ್ಲಾಸಸ್,' ಮೇಲ್ಜಾತಿ ಹಿಂದೂಗಳ ಜೊತೆ 'ಬಹಿಷ್ಕೃತ.' ಸ್ಪರ್ಧಾತ್ಮಕ ರಾಜಕೀಯಕ್ಕೆ ಬಂದಾಗ 'ಶೆಡ್ಯೂಲ್ಡ್ ಕ್ಯಾಸ್ಟ್.' ಆ ಕಾರಣಕ್ಕೆ ರಾಜಕೀಯ ಪಕ್ಷ ಸ್ಥಾಪಿಸುವಾಗ 'ಶೆಡ್ಯೂಲ್ಡ್ ಕ್ಯಾಸ್ಟ್ ಫೆಡರೇಶನ್' ಎಂದು ಕರೆದಿದ್ದರು. ಆದರೆ, 1940ರ ದಶಕದಷ್ಟು ಹೊತ್ತಿಗೆ ದಲಿತರಿಗೆ ವರ್ಗ ಗುರುತನ್ನು ನೀಡಲು ಪ್ರಯತ್ನಿಸಿದ್ದರು. ಕೊನೆಯದಾಗಿ, ಸಾಮಾಜಿಕ ಕ್ಷೇತ್ರವನ್ನು ವಿಸ್ತರಿಸಿಕೊಳ್ಳುವ ಹಿಂದೂ ವ್ಯವಸ್ಥೆಯ ಪಾದದಡಿ ಸಿಲುಕಿ ನಲುಗಿದವರು ಎಂದು 'ಪಾದ ದಲಿತ' ಎಂದು ಕರೆಯಲಾರಂಭಿಸಿದ್ದರು. ಅವರ ರಾಜಕೀಯ ವಿರೋಧಿಯಾದ ಗಾಂಧಿ 1930ರವರೆಗೆ ಅಸ್ಪೃಶ್ಯರನ್ನು 'ಅಂತ್ಯಜ' ಹಾಗೂ 'ಭಂಗಿ' ಎಂಬ ಎಂದು ಕರೆಯುತ್ತಿದವರು, ನಂತರ 'ಹರಿಜನ' ಎಂದು ಕರೆಯಲಾರಂಭಿಸಿದ್ದರು. ಸ್ವಾತಂತ್ರ್ಯೋತ್ತರದಲ್ಲೂ. ದಲಿತ ಚಳವಳಿಗಳು ಸಕ್ರಿಯವಾಗುವವರೆಗೂ, ಅಸ್ಪೃಶ್ಯರ ಕೇರಿಗಳನ್ನು ಹರಿಜನ ಕಾಲೋನಿಗಳೆಂದೇ ಕರೆಯುತ್ತಿದ್ದುದ್ದುಂಟು. ಅಷ್ಟು ಮಾತ್ರವಲ್ಲ, ಕೆಲವರು ತಮ್ಮ ಉಪನಾಮವನ್ನೇ 'ಹರಿಜನ' ಎಂದು ಇಟ್ಟುಕೊಂಡ ಉದಾಹರಣೆಗಳೂ ಇದ್ದವು.

ರಾಜರತ್ನ ತಮ್ಮ ಭಾಷಣ ಮುಗಿಸಿದ ನಂತರ ಅವರ ವಾದಕ್ಕೆ ಪ್ರತಿಕ್ರಿಯಿಸಿದವರಲ್ಲಿ ಮೊದಲನೆಯವನು ನಾನಾಗಿದ್ದೆ. ಮಹಾರಾಷ್ಟ್ರದ 'ದಲಿತ್ ಪ್ಯಾಂಥರ್ಸ್' ಚಳವಳಿ ತೋರಿಸಿಕೊಟ್ಟಿದ್ದೇ ಅಸ್ಪೃಶ್ಯ ಸಮುದಾಯಗಳು ಹೇಗೆ ತಮ್ಮ ಗತಕಾಲದ ಅವಮಾನ, ಶೋಷಣೆಯಿಂದ ಹೊರಬಂದು 'ದಲಿತ' ಎಂಬ ಐಡೆಂಟಿಟಿಯ ಮೂಲಕ ಗೌರವ, ಘನತೆಯನ್ನು ಸಾಧಿಸಬಹುದು ಅನ್ನುವುದನ್ನು. ಇಂದು ಈ ಸಮಾರಂಭದಲ್ಲಿ ಮಹಾರಾಷ್ಟ್ರದ ಮಹಾರರಾಗಲಿ, ಬೌದ್ಧಮತೀಯರಾಗಲಿ, ಅಂಬೇಡ್ಕರ್‌ವಾದಿಯಾಗಲಿ, ಪಂಜಾಬಿನ ರವಿದಾಸೀಯರಾಗಲಿ, ಚಮ್ಮಾರರಾಗಲಿ, ತಮಿಳುನಾಡಿನ ಪೆರಿಯಾರ್ ವಾದಿಗಳಾಗಲಿ, ಇಲ್ಲಿ ಸೇರಿರುವುದೇ 'ದಲಿತ' ಅನ್ನುವ ಐಡೆಂಟಿಟಿಯಿಂದಾಗಿ. ಚಾರಿತ್ರಿಕವಾಗಿ ರೂಪುಗೊಂಡು ತಾತ್ವಿಕತೆಯನ್ನು